CC

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 132 |
| ಉತ್ತರಿಸಬೇಕಾದ ದಿನಾಂಕ | : | 05.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಜಾನುವಾರು ಸಂತತಿ ಉತ್ಪನ್ನ ಮತ್ತು ಆರೋಗ್ಯ ಆರೈಕೆಗೆ ಸ್ವಯಂ ಕಾರ್ಯಕರ್ತರನ್ನು ಒಳಗೊಂಡ ಸ್ವ-ಸಹಾಯ ಗುಂಪುಗಳ (Accreditation Agent for Health and Extension of Live stock Production, A-Help) ಯೋಜನೆಯನ್ನು ಜಾನುವಾರುಗಳ ಆರೈಕೆಗೆ ಅನುಷ್ಠಾನಗೊಳಿಸಲಾಗಿದೆಯೇ; | -ಹೌದು-<br><br>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ದಡಿ (ಡೇ-ಎನ್ ಆರ್ ಎಲ್ ಎಂ) ಹಾಗೂ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ವತಿಯಿಂದ ಅನುಷ್ಠಾನ ಗೊಳಿಸಲಾಗುತ್ತಿದೆ. |
| ಆ | ಹಾಗಿದ್ದಲ್ಲಿ, ಈ ಯೋಜನೆಯ ಧ್ಯೆಯೋದ್ದೇಶಗಳು ಯಾವುವು ಮತ್ತು ಈ ಯೋಜನೆಯನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತಿದೆ; | ಪಶುಸಂಗೋಪನಾ ಚಟುವಟಿಕೆಗಳ ಅತ್ಯುತ್ತಮ ಅಭ್ಯಾಸಗಳನ್ನು (Best Practices) ಸಮುದಾಯವು ಅಳವಡಿಸಿಕೊಳ್ಳಲು ಮತ್ತು ಕೊನೆಹಂತದ ವರೆಗಿನ ಸೇವೆಯನ್ನು ಖಚಿತಪಡಿಸಲು ಸಶಕ್ತ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಜಾಲವೊಂದನ್ನು ಸೃಷ್ಟಿಸುವ ಮಹತ್ತರ ಉದ್ದೇಶವನ್ನು ಹೊಂದಿದೆ.<br><br>ಪಶುಸಂಗೋಪನೆಯಲ್ಲಿ ತೊಡಗಿರುವ ಕುಟುಂಬಗಳಿಗೆ ಅಗತ್ಯವಿರುವ ವಿಸ್ತರಣಾ ಮತ್ತು ಪಶು ಆರೋಗ್ಯ ಸೇವೆಗಳನ್ನು ತಲುಪಿಸುವ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಪಶುಸಖಿಯರನ್ನು ಗುರುತಿಸಿ ತರಬೇತುದಾರರಾಗುವಂತೆ ಅವರಿಗೆ ತರಬೇತಿ ನೀಡಿ ಗ್ರಾಮ ಮಟ್ಟದಲ್ಲಿ ವಿಸ್ತರಣಾ ಸೇವೆ ಪೂರೈಕೆದಾರರಾಗುವಂತೆ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಮಾಡಲಾಗುವುದು.<br><br>1. ಕನಿಷ್ಟ 8ನೇ ತರಗತಿಯಲ್ಲಿ ಉತ್ತೀರ್ಣರಾದ ಗ್ರಾಮೀಣ ಮಟ್ಟದ ಸೂಕ್ತ ಅಭ್ಯರ್ಥಿಗಳನ್ನು ಎನ್.ಆರ್.ಎಲ್.ಎಂ ರವರು ಆಯ್ಕೆ ಮಾಡುವುದು.<br>2. ಪಶು ಸಂಗೋಪನಾ ಇಲಾಖಾವತಿ ಯಿಂದ 7 ಮಾಡ್ಯೂಲ್ ಗಳ 42 ದಿನಗಳ ತರಬೇತಿಯನ್ನು ವಿವಿಧ ಹಂತಗಳಲ್ಲಿ ಆಯೋಜಿಸಲಾಗುವುದು.<br>3. ಅಸಕ್ತ ಮತ್ತು ಅರ್ಹ ಪಶುಸಖಿಯರನ್ನು A Help ಕಾರ್ಯಕರ್ತರನ್ನಾಗಿ ಆಯ್ಕೆ ಮಾಡಿ ಮುಂದುವರೆದ 16 ದಿನಗಳ ತರಬೇತಿಗಳನ್ನು ನೀಡಲಾಗುವುದು.<br>4. ತರಬೇತಿ ಪೂರ್ಣಗೊಂಡ ನಂತರ ಎನ್.ಡಿ.ಡಿ.ಬಿ ವತಿಯಿಂದ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.<br>5. A Help ತರಬೇತಿ ಪೂರ್ಣಗೊಂಡ ಪಶು ಸಖಿಯರು ಹತ್ತಿರದ ಪಶುವೈದ್ಯಕೀಯ ಸಂಸ್ಥೆಗಳ ಪಶುವೈದ್ಯಾಧಿಕಾರಿಗಳ ಮೇಲ್ವಿಚಾರಣೆ / ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವರು. |

...2

| | | |
|---|---|---|
| ಇ | ರಾಜ್ಯದಲ್ಲಿ ಈ ಯೋಜನೆಯಡಿ ಅಗತ್ಯವಿರುವ ಶಿಕ್ಷಣ-ತರಬೇತಿ ಮತ್ತು ಜಾನುವಾರು ಪಾಲಕರಿಗೆ ಮಾಹಿತಿ ಮುಂತಾದವುಗಳನ್ನು ಯಾವ ರೀತಿ ಒದಗಿಸಲಾಗುತ್ತಿದೆ? (ಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ಇಲಾಖಾ ತರಬೇತಿ ಕೇಂದ್ರಗಳಿರುವ 9 ಜಿಲ್ಲೆಗಳಲ್ಲಿ 2044 ಪಶು ಸಖಿಯರಿಗೆ 1ನೇ ಮಾಡ್ಯೂಲ್ ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.<br><br>ಉಳಿದ ಜಿಲ್ಲೆಗಳಲ್ಲಿ RUDSETI ವತಿಯಿಂದ ತರಬೇತಿಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ತರಬೇತಿ ಹೊಂದಿದ ಪಶು ಸಖಿಯರು ಜಾನುವಾರು ಪಾಲಕರಿಗೆ ಪಶುಪಾಲನೆ ಬಗ್ಗೆ ಅವಶ್ಯ ಮಾಹಿತಿಯನ್ನು ನೀಡುವರು.<br><br>ಪಶು ಸಖಿಯರು ಈ ಕೆಳಗಿನಂತೆ ಕಾರ್ಯನಿರ್ವಹಿಸುತ್ತಾರೆ.<br><br>1. ಜಾನುವಾರು ಪಾಲಕರಿಗೆ ಸುಧಾರಿತ ಪಶುಪಾಲನಾ ಚಟುವಟಿಕೆಗಳ ಕುರಿತು ವಿಸ್ತರಣೆ ಮತ್ತು ಜ್ಞಾನ ಹಂಚಿಕೆ.<br>2. ಗ್ರಾಮ ಮಟ್ಟದಲ್ಲಿ ರೋಗೋದ್ರೇಕ ಕಂಡು ಬಂದಲ್ಲಿ ಹತ್ತಿರದ ಪಶುವೈದ್ಯ ಸಂಸ್ಥೆಗೆ ವರದಿ ಮಾಡುವುದು ಮತ್ತು ನಿಯಂತ್ರಿಸುವಲ್ಲಿ ಸಹಕರಿಸುವುದು.<br>3. ಗ್ರಾಮ ಮಟ್ಟದಲ್ಲಿ ಜಾನುವಾರುಗಳ ಜನನ/ಮರಣ ನೋಂದಣಿ ಹಾಗೂ ಪ್ರಾಥಮಿಕ ಸೇವೆಯನ್ನು ಒದಗಿಸುವುದು.<br>4. ಸುಧಾರಿತ ಮೇವಿನ ಬೆಳೆಗಳು ಮತ್ತು ಜಾನುವಾರು ಆಹಾರಗಳ ಪದ್ಧತಿ ಕುರಿತು ಮಾಹಿತಿಯನ್ನು ನೀಡುವುದು.<br>5. ತಮ್ಮ ವ್ಯಾಪ್ತಿಯ ಗ್ರಾಮಗಳಿಗೆ ಆಗಿಂದಾಗ್ಗೆ ಬೇಟಿ ನೀಡಿ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪಶುವೈದ್ಯರ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು. |

**ಇ– ಪಸಂಮೀ 103 ಸಲೆವಿ 2023**

**(ಕೆ.ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**